20ರಿಂದ ಅಂತಾರಾಷ್ಟ್ರೀಯ ಸಿರಿಧಾನ್ಯ ಮೇಳ

ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾಹಿತಿ | 2023 ಸಿರಿಧಾನ್ಯವರ್ಷ: ಘೋಷಣೆ



ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಿರಿಧಾನ್ಯ ಮೇಳದ ಪೂರ್ವಭಾವಿ ಸಭೆಯನ್ನು ಕೃಷಿ ಸಚಿವ ಬಿ.ಸಿ.ಪಾಟೀಲ್ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೃಷಿ ಉತ್ಪನ್ನ ಮೌಲ್ಯವರ್ಧನೆಯಲ್ಲಿ ತೊಡಗಿರುವ ರೈತರಿಗೆ ಮಾರುಕಟ್ಟೆ ಒದಗಿಸಲು ಹಾಗೂ ಸಾವಯವ ಮತ್ತು ಸಿರಿಧಾನ್ಯ ಮಾರುಕಟ್ಟೆ ವಿಸ್ತರಣೆ ಉದ್ದೇಶದಿಂದ ಕೃಷಿ ಇಲಾಖೆ ಜ.20ರಿಂದ 22ರವರೆಗೆ ಬೆಂಗಳೂರು ಅರಮನೆ ಮೈದಾನದ 'ತ್ರಿಪುರವಾಸಿನಿ'ಆವರಣದಲ್ಲಿ 'ಅಂತಾರಾಷ್ಟ್ರೀಯ ಸಿರಿಧಾನ್ಯ ಮೇಳ-2023' ಆಯೋಜಿಸಿದೆ.

ಗುರುವಾರ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಿರಿಧಾನ್ಯ ಮೇಳದ ಪೂರ್ವಭಾವಿ ಸಭೆಯ ನಂತರ ಕೃಷಿ ಸಚಿವ ಬಿ.ಸಿ.ಪಾಟೀಲ್ ಈ ಮಾಹಿತಿ ನೀಡಿದರು. 2023ರನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ ಎಂದು ಘೋಷಣೆ ಮಾಡಲಾಗಿದೆ. ಸಿರಿಧಾನ್ಯಗಳನ್ನು ಬೆಳೆಯುವ ರೈತರಿಗೆ ಪ್ರೋತ್ಸಾಹಿಸುವ ಮತ್ತು ಸಿರಿಧಾನ್ಯಕ್ಕೆ ಅತ್ಯುತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಸಿರಿಧಾನ್ಯ ಮೇಳ ಆಯೋಜನೆ ಮಾಡಲಾಗುತ್ತಿದೆ ಎಂದರು.

ಮೇಳದಲ್ಲಿ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನ ಪ್ರದರ್ಶನ ಮಳಿಗೆಗಳು, ಉತ್ಪಾದಕರ ಮತ್ತು ಮಾರುಕಟ್ಟೆದಾರರ ಸಭೆ ಹಾಗೂ ಕಾರ್ಯಗಾರ, ರೈತ ಚರ್ಚಾಗೋಷ್ಠಿಗಳು, ಸಾವಯವ ಆಹಾರ ಮಳಿಗೆಗಳು ಇರಲಿವೆ. 110 ಕಂಪನಿಗಳು 218 ಮಳಿಗೆಗಳನ್ನು ಸ್ಥಾಪಿಸಲಿವೆ. ಹೆಚ್ಚು ಗ್ರಾಹಕರು, ರಫ್ತುದಾರರು, ಸಿರಿಧಾನ್ಯ ಬೆಳೆಗಾರರಿಗೆ ಸಂಪರ್ಕ ಕಲ್ಪಿಸಿ ಮಾರಾಟ ವ್ಯವಸ್ಥೆ ಒದಗಿಸುವುದು ಮತ್ತು ಸಂಸ್ಕರಣೆ ಮಾಡಲು ಈ ಮೇಳ ಸಹಕಾರಿಯಾಗಲಿದೆ ಎಂದು ಹೇಳಿದರು.

ಜ.20ರಂದು ಸಿಎಂ ಬಸವರಾಜ ಬೊಮ್ಮಾಯಿ ಸಿರಿಧಾನ್ಯ ಮೇಳ ಉದ್ಘಾಟಿಸುವರು. ಕೇಂದ್ರ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಶೋಭಾ ಕರಂದ್ಲಾಜೆ, ರಾಜೀವ್ ಚಂದ್ರಶೇಖರ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ವೆಬ್‌ಸೈಟ್ ಲೋಕಾರ್ಪಣೆ : ಅಂತಾರಾಷ್ಟ್ರೀಯ ಸಿರಿಧಾನ್ಯ ಮೇಳದ ಮಾಹಿತಿ ಸುಲಭವಾಗಿ ಎಲ್ಲರಿಗೂ ಲಭ್ಯವಾಗುವಂತೆ ಅಭಿವೃದ್ಧಿ ಪಡಿಸಲಾದ ವೆಬ್‌ಸೈಟನ್ನು ಕೃಷಿ ಸಚಿವ ಬಿ.ಸಿ.ಪಾಟೀಲ್ ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ನಿರ್ದೇಶಕ ಜಿ.ಟಿ.ಪುತ್ರನ್, ಕೃಷಿ ಇಲಾಖೆಯ ಆಯುಕ್ತ ಶರತ್, ಕೆಪೆಕ್ ಅಧ್ಯಕ್ಷ ವಿರೂಪಾಕ್ಷಪ್ಪ ,ಕೆಮಿಕ್ ನಿರ್ದೇಶಕ ಪದ್ಮನಾಭಯ್ಯ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಬಂತನಾಳ್, ಜಲಾನಯನ ಅಭಿವೃದ್ಧಿ ಇಲಾಖೆ ನಿರ್ದೇಶಕ ಶ್ರೀನಿವಾಸ್, ಅಪೆಡಾದ ರವೀಂದ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

06-01-2023
Kannadaprabha Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in

ಜಂಕ್‌ಫುಡ್ ಗುಲಾಮಗಿರಿಯಿಂದ ಹೊರಬನ್ನಿ: ಕೃಷಿ ಸಚಿವ ಬಿ.ಸಿ.ಪಾಟೀಲ್

ಜ.20ರಿಂದ ಸಿರಿಧಾನ್ಯ, ಸಾವಯವ ವಾಣಿಜ್ಯ ಮೇಳ

ಬೆಂಗಳೂರು: ಜನರು ಜಂಕ್‌ಫುಡ್ ಗುಲಾಮಗಿರಿಯಿಂದ ಹೊರಬಂದು, ಆರೋಗ್ಯಕರ ಆಹಾರ ಶೈಲಿಗೆ ಹೆಚ್ಚು ಒತ್ತು ನೀಡಬೇಕಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಸಲಹೆ ನೀಡಿದರು.

ಸಾವಯವ ಸಿರಿಧಾನ್ಯ ಮೇಳ ಕುರಿತು ಗುರುವಾರ ನಗರದಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನಿಗಳು 2023ರ ವರ್ಷವನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಘೋಷಿಸಿದ್ದು ಸಿರಿಧಾನ್ಯಬಳಕೆ ಮತ್ತು ಬೆಳೆಯುವಲ್ಲಿ ಕರ್ನಾಟಕವು ಇಡೀ ದೇಶಕ್ಕೆ ಮಾದರಿಯಾಗಿದೆ. ಆದ್ದರಿಂದ ಕರ್ನಾಟಕ 'ಸಿರಿಧಾನ್ಯಗಳ ರಾಜ' ಎಂದು ಕರೆಯಲಾಗಿದೆ ಎಂದರು.

ಭವಿಷ್ಯದ ಆಹಾರ ಸಿರಿಧಾನ್ಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಜ.20ರಿಂದ 22ರವರೆಗೆ 3 ದಿನಗಳ ಕಾಲ 'ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ' ಆಯೋಜಿಸಲಾಗಿದೆ. ಈ ಮೇಳವನ್ನು ಕೆಪೆಕ್ ಮತ್ತು ಐಸಿಸಿಒಎ ಸಂಸ್ಥೆಗಳ ಸಹಯೋಗದಲ್ಲಿ ನಗರದ ಅರಮನೆ ಮೈದಾನದತ್ರಿಪುರವಾಸಿನಿಯಲ್ಲಿಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಾವಯವ ಹಾಗೂ ಸಿರಿಧಾನ್ಯಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಜತೆಗೆ ಸಿರಿಧಾನ್ಯಗಳ ಆಮದುದಾರರು ಮತ್ತು ರಫ್ತುದಾರರ ನಡುವೆ ಸಂಪರ್ಕ ಕಲ್ಪಿಸುವುದು ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.



ಸಾವಯವ ಸಿರಿಧಾನ್ಯ ಮೇಳ ಕುರಿತ ಪೂರ್ವಭಾವಿ ಸಭಾ ಕಾರ್ಯಕ್ರಮವನ್ನು ಕೃಷಿ ಸಚಿವ ಬಿ.ಸಿ.ಪಾಟೀಲ್ ಉದ್ಘಾಟಿಸಿದರು.

ಈ ಮೇಳದಲ್ಲಿ ಸುಮಾರು 300ಕ್ಕೂ ಹೆಚ್ಚು ಮಳಿಗೆಗಳಿಗೆ ಅವಕಾಶವಿದ್ದು, 110ಕ್ಕೂ ಹೆಚ್ಚು ಕಂಪನಿಗಳು ಈಗಾಗಲೇ 218 ಮಳಿಗೆಗಳನ್ನು ಕಾಯ್ದಿರಿಸಲಾಗಿವೆ. ಇಲ್ಲಿ ಮಸಾಲೆ, ವೈವಿಧ್ಯಮಯ ಸಿರಿಧಾನ್ಯ, ಹಣ್ಣು-ತರಕಾರಿ, ಎಣ್ಣೆ ಬೀಜ-ಡ್ರೈ ಫ್ರೂಟ್ಸ್, ಸಾವಯವ ಧಾನ್ಯ-ಬೇಳೆ ಕಾಳು, ಸಿರಿಧಾನ್ಯ ಸಂಸ್ಕರಣಾ ಯಂತ್ರೋಪಕರಣ, ಸಾವಯವ ಜಾನುವಾರು ಉತ್ಪನ್ನಗಳು(ಕೋಳಿ, ಡೈರಿ, ಜೇನಿನ ಉತ್ಪನ್ನ), ಸೌಂದರ್ಯವರ್ದಕ, ಪರಿಸರ ಸ್ನೇಹಿ ಉತ್ಪನ್ನಗಳು ಸೇರಿದಂತೆ ಹಲವು ಉತ್ಪನ್ನಗಳು ದೊರೆಯುತ್ತವೆ. ಆದ್ದರಿಂದ ಜಂಕ್‌ಫುಡ್ ಮಾದರಿಯನ್ನು ಕೈಬಿಟ್ಟು ಉತ್ತಮ ಆರೋಗ್ಯಕ್ಕಾಗಿ ಸಾವಯವ ಸಿರಿಧಾನ್ಯಗಳಿಗೆ ಹೆಚ್ಚು ಒತ್ತು ನೀಡಬೇಕು ಎಂದು ಕರೆ ನೀಡಿದರು.

ವಾಕಾಥಾನ್: ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳವನ್ನು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜ.20ರಂದು ಉದ್ಘಾಟಿಸಿದ್ದು, ಕೇಂದ್ರ ಮಂತ್ರಿಗಳು ಹಾಗೂ ನೆರೆ ರಾಜ್ಯಗಳ ಸಚಿವರೂ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಿರಿಧಾನ್ಯ ಸಾವಯವ ಕುರಿತು ಜಾಗೃತಿಗೆ ಕಬ್ಬನ್ ಪಾರ್ಕಿನಲ್ಲಿ ಜ.14ರಂದು ವಾಕಾಥಾನ್ ಆಯೋಜಿಸಲಾಗಿದೆ. ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಿರಿಧಾನ್ಯ ಸಾವಯವ ಮೇಳಗಳು ನಡೆಯುತ್ತಿವೆ ಎಂದು ಸಚಿವರು ತಿಳಿಸಿದರು.

ಇದೇ ಸಂದರ್ಭದಲ್ಲಿ www.organics-millets.in ಸಿರಿಧಾನ್ಯ ಮೇಳದ ವೆಬ್‌ಸೈಟ್ ಅನ್ನು ಲೋಕಾರ್ಪಣೆಗೊಳಿಸಿದರು. ಕೃಷಿ ಇಲಾಖೆಯ ನಿರ್ದೇಶಕ ಜಿ.ಟಿ.ಪುತ್ರನ್, ಕೃಷಿ ಇಲಾಖೆಯಯುಕ್ತ ಶರತ್, ಕೆಪೆಕ್ ಅಧ್ಯಕ್ಷ ವಿರೂಪಾಕ್ಷಪ್ಪ ಕೆಮಿಕ್ ನಿರ್ದೇಶಕ ಪದ್ಮನಾಭಯ್ಯ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಬಂತನಾಳ್, ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಶ್ರೀನಿವಾಸ್, ಅಪೆಡಾ ಜಿ.ಎಂ, ರವೀಂದ್ರ ಇತರರಿದ್ದರು.

ಹೆಕ್ಟೇರ್‌ಗೆ 6 ಸಾವಿರ ರೂ. ಪ್ರೋತ್ಸಾಹ ಧನ

ಕರ್ನಾಟಕ ಸರ್ಕಾರ ರೈತ ಸಿರಿ ಯೋಜನೆಯಲ್ಲಿ ರೈತರಿಗೆ ಈ ವರ್ಷ ಒಂದು ಹೆಕ್ಟೇರ್‌ಗೆ 6 ಸಾವಿರ ರೂ. ಪ್ರೋತ್ಸಾಹ ಧನ ಹಾಗೂ ಸಿರಿಧಾನ್ಯಗಳ ಸಂಸ್ಕರಣಾ ಘಟಕಗಳನ್ನು ಪ್ರಾರಂಭ ಮಾಡಲಾಗುತ್ತಿದ್ದು, 10 ಲಕ್ಷ ರೂ.ಗಳ ರಿಯಾಯಿತಿ ನೀಡಲಾಗುತ್ತದೆ ಎಂದು ಸಚಿವರು ತಿಳಿಸಿದರು.

06-01-2023
Udayavani Pg 03

06-01-2023
Vijayavani Pg 13

ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜನೆ | ವೆಬ್‌ಸೈಟ್ ಅನಾವರಣ

20ರಿಂದ ಸಿರಿಧಾನ್ಯ ಸಾವಯವ ಮೇಳ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಘೋಷಿಸಿದ ಬಳಿಕ ದೇಶದಲ್ಲೇ ಮೊದಲ ಬಾರಿಗೆ ರಾಜ್ಯದಲ್ಲಿ ಅಂತಾರಾಷ್ಟ್ರೀಯ ಸಿರಿಧಾನ್ಯ ಹಾಗೂ ಸಾವಯವ ಮೇಳವನ್ನು ಜ.20ರಿಂದ 22ರವರೆಗೆ ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದ್ದು, ಸಿರಿಧಾನ್ಯ ಬೆಳೆಗಾರರು, ಮಾರಾಟಗಾರರು, ಸಂಸ್ಕರಣೆ ಕ್ಷೇತ್ರದವರ ಸಮಾಗಮವಾಗಲಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.



ಮೇಳದ ವೆಬ್‌ಸೈಟ್ ಉದ್ಘಾಟಿಸಿ ಮಾಹಿತಿ ಹಂಚಿಕೊಂಡ ಅವರು, ಮೇಳದಲ್ಲಿ ಹಲವು ವಿಶೇಷತೆಗಳಿರುತ್ತವೆ. ಜನರಿಗೆ ಜಾಗೃತಿ ಮೂಡಿಸಲು ಹಾಗೂ ಸಿರಿಧಾನ್ಯ ಸಾವಯವ ಬೆಳೆಗಾರರಿಗೆ ಉತ್ತೇಜನ ನೀಡಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕೆಪೆಕ್ ಅಧ್ಯಕ್ಷ ವಿರೂಪಾಕ್ಷಪ್ಪ ಮಾತನಾಡಿ, ಸಾವಯವ ಆಹಾರ ಉತ್ಪನ್ನ ಹೆಚ್ಚಾಗಬೇಕು, ಸಿರಿಧಾನ್ಯ ಉತ್ಪಾದನೆ ಹೆಚ್ಚಬೇಕು. ಸಿರಿಧಾನ್ಯ ಬೆಳೆಯಲು ರೈತರಿಗೆ ಪ್ರೋತ್ಸಾಹ ಸಿಗಬೇಕು. ಕೇಂದ್ರ, ರಾಜ್ಯ ಸರ್ಕಾರ ಪ್ರೋತ್ಸಾಹ ನೀಡಿದರೂ ದೊಡ್ಡ ಪ್ರಮಾಣದಲ್ಲಿ ಸಿರಿಧಾನ್ಯ, ಸಾವಯವ ಉತ್ಪನ್ನ ಬೆಳೆಯಲು ಮುಂದೆ ಬರುತ್ತಿಲ್ಲ, ಪ್ರೋತ್ಸಾಹ ಇನ್ನಷ್ಟು ಹೆಚ್ಚಿಸಬೇಕು ಎಂದರು.

ಕೃಷಿ ಇಲಾಖೆ ಆಯುಕ್ತ ಶರತ್ ಮಾತನಾಡಿ, ಭಾರತವು ಯೋಗವನ್ನು ಪ್ರಪಂಚಕ್ಕೆ ಸಾರಿತು. ಅದೇ ರೀತಿ ಸಿರಿ ಧಾನ್ಯವನ್ನು ಪ್ರಪಂಚಕ್ಕೆ ವಿಸ್ತರಿಸಲಾಗುತ್ತಿದೆ. ಸಿರಿಧಾನ್ಯ ವರ್ಷದ ಘೋಷಣೆ ಮೂಲಕ ಅರಿವು ಮೂಡಿಸಲಾಗುತ್ತಿದೆ. ಸಿರಿಧಾನ್ಯ ಕ್ಷೇತ್ರದಲ್ಲಿ ಕರ್ನಾಟಕ ನೇತೃತ್ವ ವಹಿಸಿಕೊಂಡಿದೆ ಎಂದು ಹೇಳಿದರು.

ಕೃಷಿ ಇಲಾಖೆಯ ನಿರ್ದೇಶಕ ಜಿ.ಟಿ.ಪುತ್ರನ್, ಕೆಮಿಕ್ ನಿರ್ದೇಶಕ ಪದ್ಮನಾಭಯ್ಯ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಬಂತನಾಳ್ ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಶ್ರೀನಿವಾಸ್, ಅಪೆಡಾ ಜಿಎಂ ರವೀಂದ್ರ ವೇದಿಕೆಯಲ್ಲಿದ್ದರು.

ವಸ್ತು ಪ್ರದರ್ಶನ ವಿಶೇಷ

1. 300ಕ್ಕೂ ಹೆಚ್ಚು ಮಳಿಗೆಗಳಿರಲಿದ್ದು, ವೈವಿಧ್ಯಮಯ ಸಿರಿಧಾನ್ಯ ಉತ್ಪನ್ನ, ಮಸಾಲೆ ಉತ್ಪನ್ನ, ಗಿಡಮೂಲಿಕೆಗಳು, ಪ್ರಮಾಣಿಕೃತ ಅರಣ್ಯ ಉತ್ಪನ್ನ, ಸಿರಿಧಾನ್ಯ ಸಂಸ್ಕರಣಾ ಯಂತ್ರೋಪಕರಣ, ಜೈವಿಕ ಕೊಳೆಯುವ ಪ್ಯಾಕಿಂಗ್ ವಸ್ತು ಪ್ರದರ್ಶನ, ಮಾರಾಟ ಇರಲಿದೆ.

2. ಜರ್ಮನಿ, ದಕ್ಷಿಣ ಕೋರಿಯಾ ಅಂತರಾಷ್ಟ್ರೀಯ ಸಾವಯವ ಸಂಸ್ಥೆಗಳು, ಯುಕೆ, ಮಲೇಷಿಯಾ, ಉಗಾಂಡ, ನೆದರ್ಲ್ಯಾಂಡ್ ಸಾವಯವ ಉತ್ಪನ್ನಗಳ ಕಂಪನಿಗಳು ಭಾಗವಹಿಸಲಿವೆ.

3. ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಸವಾಲುಗಳ ನಡುವೆ ಸವಾಲುಗಳ ನಡುವೆ ಅವಕಾಶಗಳು ವಿಷಯ ಮೇಲೆ ಪ್ಯಾನಲ್ ಚರ್ಚೆ ನಡೆಯುವುದು. ಆರು ಅಂತರಾಷ್ಟ್ರೀಯ ತಜ್ಞರೂ ಸಹ ಭಾಗವಹಿಸುವರು.

4. ರೈತರ ಕಾರ್ಯಾಗಾರದಲ್ಲಿ ವಿಜ್ಞಾನಿಗಳು ಪಾಲ್ಗೊಳ್ಳುವರು. ಉತ್ಪಾದಕರು- ಮಾರುಕಟ್ಟೆಗಾರರ ಸಭೆ ಕೂಡ ನಡೆಯುವುದು. ಕರ್ನಾಟಕ ಪೆವಿಲಿಯನ್‌ನಲ್ಲಿ ರಾಜ್ಯದ ಕೃಷಿ ನೀರಿ, ಕೃಷಿ ಪದ್ಧತಿ, ತಾಂತ್ರಿಕತೆಗಳು, ವೈವಿಧ್ಯಮಯ ಹವಾಮಾನ, ವಿವಿಧ ಮಣ್ಣಿನ ಮಾದರಿಗಳನ್ನು ಪ್ರದರ್ಶಿಸಲಾಗುತ್ತದೆ.

ಮಳೆಯಿಂದ ಬೆಳೆ, ಗುಣಮಟ್ಟ ನಷ್ಟ: ಕುಸಿದ ಆವಕ, ಬೆಲೆ ಹೆಚ್ಚಳ

ಋತುವಿಲ್ಲೂ ಕಡಿಮೆಯಾಗದ ಮೆಣಸಿನ ಖಾರ

ನ ಹೂವಪ್ಪ ಐ.ಚ್. ಬೆಂಗಳೂರು

ಮೆಣಸಿನಕಾಯಿ ಹಂಗಾಮು ಋತು ಬಂದರೆ ಬೆಲೆ ಕಡಿಮೆಯಾಗುತ್ತದೆ ಎಂಬ ಗ್ರಾಹಕರ ನಿರೀಕ್ಷೆ ಈ ವರ್ಷ ಹುಸಿಯಾಗಿದೆ.ಈ ಬಾರಿ ಈ ಋತುವಿನಲ್ಲಿ ಮಾರುಕಟ್ಟೆಗೆ ಕಡಿಮೆ ಗುಣಮಟ್ಟದ ಮೆಣಸಿನಕಾಯಿ ಬರುತ್ತಿದೆ ಮತ್ತು ಕಳಪೆ ಬಣ್ಣದಿಂದ ಕೂಡಿದೆ ಎಂದು ಹೇಳಲಾಗುತ್ತಿದೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆ ಕಳೆದ ನವೆಂಬರ್‌ನಲ್ಲಿ ಸುರಿದ ಮಳೆಗೆ ಬಲಿಯಾಗಿದೆ. ಮೆಣಸಿನಕಾಯಿ ಬೆಳೆಗೆ ಅಕಾಲಿಕ ಮಳೆ ಹೊಡೆತ ನೀಡಿದ್ದು, ಶೇ.30 ಇಳುವರಿ ಕುಸಿದಿದೆ. ಹೀಗಾಗಿ ಮಾರುಕಟ್ಟೆಗೆ ಮೆಣಸಿನಕಾಯಿ ಕಡಿಮೆ ಪ್ರಮಾಣ ಬರುತ್ತಿದೆ. ಇದು ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ.

ಸಾಮಾನ್ಯವಾಗಿ, ನವೆಂಬರ್-ಡಿಸೆಂಬರ್‌ನಲ್ಲಿ ಬ್ಯಾಡಗಿ ಮಾರುಕಟ್ಟೆಗೆ ಒಂದು ಲಕ್ಷದಷ್ಟು ಚೀಲ ಪೂರೈಕೆಯಗಬೇಕಿದ್ದ ಮೆಣಸಿನಕಾಯಿ ಈ ವರ್ಷ ಕೇವಲ 45-50 ಸಾವಿರ ಚೀಲಗಳಷ್ಟು ಪೂರೈಕೆಯಾಗುತ್ತಿದೆ.

ಹರಾಜಿನ ಬೆಲೆ: ಬ್ಯಾಡಗಿ ಮಾರುಕಟ್ಟೆಯ ಹರಾಜಿನಲ್ಲಿ ಡಬ್ಬಿ ಮೆಣಸಿನಕಾಯಿ, ಕಳೆದ ವರ್ಷ ಕ್ವಿಂಟಲ್‌ಗೆ ಗುಣಮಟ್ಟ ಅನುಸಾರ 16,009 ರಿಂದ 51,786 ರು.ಗೆ ಮಾರಾಟವಾಗಿತ್ತು. ಆದರೆ, ಈ ವರ್ಷ 25,000 ರಿಂದ 56,199 ರು.ಗೆ ವ್ಯಾಪಾರವಾಗಿದೆ.

ಅದೇ ರೀತಿ, ಬ್ಯಾಡಗಿ ಕಡ್ಡಿ ತಳಿ ಮೆಣಸಿನಕಾಯಿ ಕಳೆದ ವರ್ಷ ಕ್ವಿಂಟಲ್‌ಗೆ ಗುಣಮಟ್ಟ ಆಧಾರದ ಮೇಲೆ 12,589 ರಿಂದ 36,899 ರು.ಗೆ ಮಾರಾಟವಾಗಿತ್ತು. ಈ ವರ್ಷ 23,100ರಿಂದ 47,119 ರು. ಗೆ ಮಾರಾಟವಾಗಿದೆ.



ಬ್ಯಾಡಗಿ ತಳಿಯ ವಿಶೇಷ

ತಿಳಿ ಕೆಂಪು ಬಣ್ಣಕ್ಕೆ ಹೆಸರುವಾಸಿಯಾಗಿದ್ದ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯು ಡಬ್ಬಿ ಮತ್ತು ಕಡ್ಡಿ ತಳಿಗೆ ಹೆಸರುವಾಸಿಯಾಗಿದ್ದು, ಅವುಗಳಿಂದ ಒಲಿಯೊರೆಸಿನ್ ಎಣ್ಣೆಯನ್ನು ಹೊರತೆಗೆದು ರಫ್ತು ಮಾಡಲಾಗುತ್ತಿದೆ. ಹೀಗಾಗಿ ಭಾರಿ ಬೇಡಿಕೆಯಿದೆ. ಕಡ್ಡಿ ವಿಧವು ಹೆಚ್ಚು ಬೀಜಗಳಿಲ್ಲದೆ ತೆಳ್ಳಗೆ ಮತ್ತು ಉದ್ದವಾಗಿದ್ದರೆ, ಡಬ್ಬಿ ಹೆಚ್ಚು ಬೀಜಗಳೊಂದಿಗೆ ಚಿಕ್ಕದಾಗಿದೆ ಮತ್ತು ಕೊಚ್ಚು ಹೆಚ್ಚಿರುತ್ತದೆ. ಕೊಬ್ಬಿದ ವಿಧವನ್ನು ಲಿಪ್ಟಿಕ್ ಉದ್ಯಮವು ಬಳಸುತ್ತದೆ. ಒಲಿಯೊರೆಸಿನ್ ಎಣ್ಣೆಯನ್ನು ಹೊರತೆಗೆಯುವುದು ಕೈಗಾರಿಕೆಗಳಿಗೆ ದೊಡ್ಡ ಸವಾಲಾಗಿದೆ.

ಬೆಂಗಳೂರು ಮಾರುಕಟ್ಟೆಯಲ್ಲಿ ಬ್ಯಾಡಗಿ ತಳಿ ಕ್ವಿಂಟಲ್‌ಗೆ 42,000 ರಿಂದ 52,000 ರು.ಗೆ ಮಾರಟವಾಗಿದೆ.

> ನವೆಂಬರ್‌ನಲ್ಲಿ ಸುರಿದ ಮಳೆಯಿಂದಾಗಿ ಈ ವರ್ಷ ಒಣ ಮೆಣಸಿನಕಾಯಿ ಪಸಲು ಬರಲು ಒಂದು ತಿಂಗಳು ತಡವಾಗಿದೆ. ಹೀಗಾಗಿ ಮಾರುಕಟ್ಟೆಗೆ ಸದ್ಯ ಅವಕ ಕಡಿಮೆ ಬರುತ್ತಿದೆ. ಮುಂದಿನ ದಿನಗಳಲ್ಲಿ ಆವಕ ಹೆಚ್ಚಾಗಲಿದೆ.
>
> -ಬಿ ಎಸ್ ಗೌಡರ್ ಬ್ಯಾಡಗಿ ಮಾರುಕಟ್ಟೆ ಅಧಿಕಾರಿ

> ಈ ವರ್ಷ ಅತಿವೃಷ್ಟಿ ಮಳೆಯಿಂದಾಗಿ ಬ್ಯಾಡಗಿ ಸಿನಕಾಯಿ ಬೆಳೆಗೆ ಪಂಗಸ್ ರೋಗ ತಗಲಿದೆ. ಹೀಗಾಗಿ ಶೇ. 60 ರಷ್ಟು ಗುಣಮಟ್ಟ ಕಳೆದುಕೊಂಡಿದೆ. ಉತ್ತಮ ಗುಣಮಟ್ಟ ಮೆಣಸಿನ ಕಾಯಿ ಗೆ ಬೇಡಿಕೆ ಇರುವುದರಿಂದ ಬೆಲೆ ಹೆಚ್ಚಿದೆ.
>
> -ಸಂಗಪ್ಪ ರಾಣೆಬೆನ್ನೂರು ರೈತ

ಗುಂಟೂರು ತಳಿ 27,000ರಿಂದ 28,500 ರು. ಗೆ ಹಾಗೂ ಮಣ್ಣುಕಟ್ ತಳಿ ಮೆಣಸಿನಕಾಯಿ 22,500-25,000 ರು. ಗೆ ಮಾರಟವಾಗಿದೆ.

ಮಾರುಕಟ್ಟೆಗೆ ಪ್ರತಿ ವರ್ಷ ಹಾವೇರಿ, ಗದಗ, ಬಳ್ಳಾರಿ, ಧಾರವಾಡ, ರಾಯಚೂರು, ಬಾಗಲಕೋಟೆ ಹಾಗೂ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತೆಲಂಗಾಣದಿಂದ ಮೆಣಸಿನಕಾಯಿ ಬರುತ್ತದೆ. ಆದರೆ ನವೆಂಬರ್‌ನಲ್ಲಿ ಈ ಪ್ರದೇಶಗಳಲ್ಲಿ ಭಾರೀ ಮಳೆ ಸುರಿದ ಹಿನ್ನೆಲೆಯಲ್ಲಿ ಇಳುವರಿ ಮತ್ತು ಗುಣಮಟ್ಟ ಕುಸಿಯಲು ಕಾರಣ ಎನ್ನುತ್ತಾರೆ ಬ್ಯಾಡಗಿ ಮೆಣಸಿನಕಾಯಿ ವ್ಯಾಪಾರಿಗಳು.

ಈ ಬಾರಿ ಮಾರುಕಟ್ಟೆಗೆ ಬಂದಿರುವ ಮೆಣಸಿನಕಾಯಿ ಗುಣಮಟ್ಟ ಕಡಿಮೆಯಾಗಿದ್ದು, ಮಳೆಯಿಂದಾಗಿ ಬೆಳೆಗೆ ಫಂಗಸ್ ರೋಗ ತಗಲಿದೆ. ತಿಳಿ ಕೆಂಪು ಬಣ್ಣಕ್ಕೆ ಹೆಸರುವಾಸಿಯಾಗಿದ್ದ ಬ್ಯಾಡಗಿ ಮೆಣಸಿನಕಾಯಿ ಫಂಗಸ್ ಬಾಧೆಯಿಂದ ಕಳೆಗುಂದಿದ್ದು, ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗದೆ ರೈತರು ಕಂಗಾಲಾಗಿದ್ದಾರೆ.

ಸರಕಾರಕ್ಕೆ ಮೊರೆ: ಅತಿವೃಷ್ಟಿಯಿಂದ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯನ್ನು ಅವಲಂಬಿಸಿರುವ ರೈತರು, ವರ್ತಕರು, ಕಾರ್ಮಿಕರು, ಕಮಿಷನ್ ಏಜೆಂಟರು ಸೇರಿದಂತೆ ಸಾವಿರಾರು ಜನರು ಪರದಾಡುವಂತಾಗಿದೆ. ಮೆಣಸಿನಕಾಯಿ ಬಣ್ಣ ಕಳೆದುಕೊಂಡು ಬೆಳ್ಳಗಾಗಿದೆ. ಇಂತಹ ಕಡಿಮೆ ಗುಣಮಟ್ಟದ ಉತ್ಪನ್ನಕ್ಕೆ ಉತ್ತಮ ಬೆಲೆ ಸಿಗುವುದಿಲ್ಲ. ರಾಜ್ಯ ಹಾಗೂ ಕೇಂದ್ರ ಸರಕಾರ ಮೆಣಸಿನಕಾಯಿ ಬೆಳೆಗಾರರಿಗೆ ನೆರವು ನೀಡಬೇಕು ಎಂದು ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯ ವರ್ತಕರ ಸಂಘದ ಅಧ್ಯಕ್ಷ ಸುರೇಶಗೌಡ ಪಾಟೀಲ ಹಾಗೂ ಮಾಜಿ ಶಾಸಕ ಸುರೇಶಗೌಡ ಪಾಟೀಲ ಒತ್ತಾಯಿಸಿದರು.

ಹಿಂದಿನ ಹಂಗಾಮಿಗಿಂತ ಹೆಚ್ಚಿನ ಪ್ರಮಾಣದ ಚಳಿಯನ್ನು ನಿರೀಕ್ಷಿಸಿದ್ದೆವು. ಆದರೆ ಭಾರಿ ಮಳೆಯು ಗುಣಮಟ್ಟ ಮತ್ತು ಪ್ರಮಾಣದ ಮೇಲೂ ಪರಿಣಾಮ ಬೀರಿದೆ, ಮುಂದಿನ ಎರಡು ವಾರಗಳಲ್ಲಿ ಉತ್ತಮ ಗುಣಮಟ್ಟದ ಮೆಣಸಿನಕಾಯಿ ಸಿಗುತ್ತದೆ. ಮುಂದಿನ ವಾರಗಳಲ್ಲಿ ಗುಣಮಟ್ಟದ ಮೆಣಸಿನಕಾಯಿ ಹಲವಾರು ಭಾಗಗಳಲ್ಲಿ ಲಭ್ಯವಾಗಲಿದೆ ಎಂದು ನಾವು ಭಾವಿಸುತ್ತೇವೆ ಎನ್ನುತ್ತಾರೆ ಬ್ಯಾಡಗಿ ಮಾರುಕಟ್ಟೆಯ ವರ್ತಕರು.

06-01-2023
Viswavani Pg 14